ಫ್ರೇನಿಯನ್ನು ಕೇಳಿ ನೋಡಬೇಕು; ಕತೆ ಕೇಳುತ್ತ ಹೋದಹಾಗೆ, ತಮ್ಮನ್ನು ಈ ಮುದಿ ವಯಸ್ಸಿನಲ್ಲಿ ಆಳುಕಾಳುಗಳ ತಾಬೆಯಲ್ಲಿ ಬಿಟ್ಟುಹೋಗುವ ಯೋಚನೆಯಲ್ಲಿದ್ದ ಸೋರಾಬ ಡಾಯನಾ ತಲೆಯಲ್ಲಿ ತುಂಬಿದಾಗ ಅವರು ಹೋಗಲಿದ್ದ ಕುಬೇರ ಸಾಮ್ರಾಜ್ಯದ ಬಗ್ಗೆ ತಾನು ಯೋಚಿಸುತ್ತಿರಬಹುದಾದರೂ ಇಂಥ ಪ್ರತಿಮೆಗಳು ತನ್ನ ಕಲ್ಪನೆಗೆ ಅಸಾಧ್ಯ! ಅಥವಾ ತನ್ನ ಮೊಟ್ಟ ಮೊದಲಿನ ಗುಮಾನಿಯೇ ಸರಿಯಾದದ್ದೇ? ಮುದುಕನಿಗೆ ಬುದ್ಧಿಭ್ರಂಶವೆ? ಆರಂಭವಾದಾಗ ಕತೆ ಅವನು ಹುಡುಕುತ್ತಿದ್ದವನ ಬಗೆಗಿದೆಯೆಂದು ತೋರಿದ್ದರೂ ಕೊನೆಕೊನೆಗೆ ಅದು ಅವನನ್ನು ಹುಡುಕುತ್ತಿದ್ದವನ ಕತೆಯಾಗಿ ತೋರಿರಲಿಲ್ಲವೆ?' ಪಾಪ! ಮನೆಯ ಮಕ್ಕಳೇ ಇವನನ್ನು ಹೊರಗೆ ಹಾಕಿರಬಹುದೆ? ದಾರಿ ತಪ್ಪಿ ತಮ್ಮ ಕಟ್ಟಡಕ್ಕೆ ಬಂದಿರಬಹುದೆ? ತನ್ನದಲ್ಲದ ಸ್ಥಿತಿಯ ಬಗ್ಗೆ ಕೇವಲ ಊಹೆಯಿಂದ ಯಾವ ನಿರ್ಧಾರಕ್ಕೂ ಬರುವುದು ಅಸಾಧ್ಯವಾದಾಗ ಜಮಶೇದನಿಗೆ ತನ್ನ ಮನಸ್ಸು ವಿವೇಕಶೂನ್ಯತೆಯ ಅಂಚಿಗೆ ಹತ್ತಿರವಾಗುತ್ತಿರುವ ಭಯವಾಯಿತು. ಅದೇ ಹೊತ್ತಿಗೇ ಧೋಂಡೂ ಬಾಲ್ಕನಿಯ ಪರದೆ ಸರಿಸಿದ್ದರಿಂದ ಒಳಗೆ ಬಂದ ಬೆಳಕಿನಿಂದಾಗಿ ಜೀವಕ್ಕೆ ನಿರಂಬಳವಾಯಿತು.

ಇಲ್ಲಿ, ಈ ನಾಲ್ಕು ಗೋಡೆಗಳ ಒಳಗೇ ಕುಳಿತು, ಒಮ್ಮೆಲೇ ಮೌನ ಧರಿಸಿ ಕುಳಿತುಬಿಟ್ಟ. ಈ ಮೂವರು ವಯೋವೃದ್ಧರನ್ನು ನೋಡುತ್ತ ಉಳಿದರೆ ತನಗೆ ಹುಚ್ಚೇ ಹಿಡಿದೀತು ಎಂದು ಆತಂಕಪಟ್ಟವನ ಹಾಗೆ ಧೋಂಡೂ ಪರದೆ ಸರಿಸಿದ ಮೇಲೆ, ಬಾಲ್ಕನಿಯ ಕದವನ್ನ ತೆರೆದು ಹೊರಗೆ ಹೋಗಿ ಸಮುದ್ರದಿಂದ ಬೀಸುವ ಸಂಜೆಯ ಗಾಳಿಗೆ ತನ್ನನ್ನು ಒಡ್ಡಿಕೊಂಡ. ಜೀವಕ್ಕೆ ಆಹಾ! ಎನ್ನಿಸಿತು. ಮುದುಕ ಹುಡುಕುತ್ತಿದ್ದ ಹುಡುಗ ತಾನೇ ಇರಲಾರೆನಷ್ಟೇ ಎಂದುಕೊಳ್ಳುವ ಮಟ್ಟಿಗೆ ಭಾವುಕನಾಗಿದ್ದ ಧೋಂಡೂಗೆ ಇದ್ದರೂ ಇದ್ದೀತಪ್ಪ– ಈ ನರಜನ್ಮದಲ್ಲಿ ಏನೂ ಸಾಧ್ಯ ಅನ್ನಿಸಿತು. ತಂದೆತಾಯಿ, ಅಣ್ಣತಮ್ಮಂದಿರ ಮೊರೆ ನೋಡಿಯೇ ಗೊತ್ತಿಲ್ಲದ, ತಬ್ಬಲಿಯಾಗಿಯೇ ಬೆಳೆದ ಧೋಂಡೂ ದೊಡ್ಡ ತತ್ವಜ್ಞಾನಿಯ ಧರ್ತಿಯಲ್ಲೇ ಸಂಜೆಯ ಹೊಂಬೆಳಕಿನಲ್ಲಿ ಬೆಳಗಿದ ದಿಗಂತದತ್ತ ಕಣ್ಣು ಹಾಯಿಸಿದ ಮರುಕ್ಷಣ, ಈ ಗದ್ದಲ ಎಲ್ಲಿಂದ ಎಂದು ಕೇಳಿಕೊಂಡು ಕಿವಿನಿಗುರಿಸಿ ಬಾಲ್ಕನಿಯ ಕಟಕಟೆಯ ದಡಿಯ ಮೇಲೆ ಕೈಯೂರಿ ಎಂಟು ಮಜಲು ಕೆಳಗೆ ಕಂಪೌಂಡು– ನೆಲದತ್ತ ಕಣ್ಣು ಹಾಯಿಸಿದ್ದೆ ತಡ, 'ಹರಿ ಹರಿ ವಿಠ್ಠಲಾ! ಪಂಡರಪುರದ ಪಾಂಡುರಂಗಾ!' ಎಂದು ಹೌಹಾರಿದವನ ಹಾಗೆ ಉದ್ಗಾರ ತೆಗೆದು ಬಾಲ್ಕನಿ ಬಿಟ್ಟು ಒಳಗೆ ಬಂದ. ಧೋಂಡೂನ ಬಾಯಿಂದ ಇಂಥ ಉದ್ಗಾರ ಹೊರಡುವದು ದೊಡ್ಡ ಅನಾಹುತದ ಸಂದರ್ಭದಲ್ಲಿ ಮಾತ್ರ ಎಂದು ಗೊತ್ತಿದ್ದ ಜಮಶೇದ –ಫ್ರೇನಿ ಇಬ್ಬರೂ– 'ಏನಾಯಿತು ಧೋಂಡೂ?' ಎಂದು ಕೇಳಿದರು. ಧೋಂಡೂ ಕೆಳಗೆ ಓಡುವ ತರಾತುರಿ ಪ್ರಕಟಿಸುತ್ತ– 'ಯಾರೋ ಆ್ಯಕ್ಸಿಡೆಂಟಿನಲ್ಲಿ ಸತ್ತಿರಬೇಕು, ಇಲ್ಲವೆ ಕೊಲೆಯಾಗಿರಬೇಕು. ಜನ ಗುಂಪುಗೂಡಿದ್ದಾರೆ. ಪೊಲೀಸ್ ಜೀಪ್ ಬಂದಿದೆ' ಎಂದ. ಭಯಂಕರವಾದ ಘಟನೆಯೆಂಬ ವಿಚಾರ ಧೋಂಡೂನ ಮೆದುಳಿನಲ್ಲಿ ಪ್ರತಿಮೆಯಾಗುತ್ತಿದ್ದದ್ದು ಎರಡೇ ಆಗಿ: ಒಂದೋ ಆ್ಯಕ್ಸಿಡೆಂಟ್ ಇಲ್ಲವೋ ಕೊಲೆ! ಪ್ರತಿಮೆ ಮೂಡುವುದೇ ತಡ– ಕಾರಣವಾದ ತಾಣವನ್ನು ಹುಡುಕಿ ಹೊರಟನೇ! ಕಣ್ಣಾರೆ ನೋಡಿದ ಹೊರತು ಅವನ ಅಸ್ವಸ್ಥ ಜೀವಕ್ಕೆ ಸಮಾಧಾನವೆಂಬುದು ಇಲ್ಲವೇ ಇಲ್ಲ. ಈಗಲೂ ಹಾಗೆಯೇ ಆಯಿತು. 'ಬಂದೇ' ಎಂದವನು ಹಾಲಿನ ಕದ ತೆರೆದು ಹೊರಗೆ ನಡೆದೇಬಿಟ್ಟ.

(ಉಳಿದ ಭಾಗ ಮುಂದಿನ ಸಂಚಿಕೆಗೆ)